ಹೆಚ್ಚುವರಿ ವಿದ್ಯುತ್ ಉತ್ಪಾದಿಸುವ ಸಲುವಾಗಿ ಸಾರ್ವಜನಿಕರು ಹಾಗೂ ಬಂಡವಾಳ ಸಂಸ್ಥೆಗಳಿಂದ ಹಣ ಸಂಗ್ರಹಣೆ.

162 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವ ಸಲುವಾಗಿ ಸಾರ್ವಜನಿಕರು ಹಾಗೂ ಬಂಡವಾಳ ಸಂಸ್ಥೆಗಳಿಂದ ಹಣ ಸಂಗ್ರಹಿಸುವ ಯೋಜನೆಯನ್ನು ಸರ್ಕಾರದವರು ಯೋಚಿಸಿರುವರೆ?*

ಆ) *ಹಾಗಿದ್ದಲ್ಲಿ ಈ ಯೋಜನೆಯ ರೂಪ ರೇಷಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕರ್ನಾಟಕ ವಿದ್ಯುತ್ ನಿಗಮವು ಹೊಸ ಯೋಜನೆಗಳನ್ನು ಕೈಗೆತ್ತಿಗೊಳ್ಳಲು ಬಂಡವಾಳ ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಹಣ ಸಂಗ್ರಹಿಸುವ ಕಾರ್ಯವನ್ನು ಯೋಚಿಸಿಕೊಂಡಿದ್ದು ಈ ನಿಟ್ಟಿನಲ್ಲಿ ಹಣಕಾಸು ಸಂಸ್ಥೆಗಳೊಂದಿಗೆ ಚರ್ಚೆ ನಡೆಸಲಾಗುತ್ತಿದೆ.

ಆ) ಯೋಜನೆಗಳನ್ನು ಇನ್ನು ಪೂರ್ಣಗೊಳಿಸಿರುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರಗಳು

163 - ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳು ಯಾವುವು? ಹಾಗೂ ಅವುಗಳ ಉತ್ಪಾದನಾ ಗುರಿ, ಉತ್ಪಾದಿಸುತ್ತಿರುವ ಸಾರ್ಮರ್ಥ್ಯ ಎಷ್ಟು?*

ಆ) *ಈ ಕೇಂದ್ರಗಳು 1993-94, 1994-95ರಲ್ಲಿ ಎಷ್ಟು ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಿದೆ ?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕೇಂದ್ರದ ಪಾಲನ್ನು ಬಿಟ್ಟು ರಾಜ್ಯದಲ್ಲಿ ಒಟ್ಟು 20 ವಿದ್ಯುತ್ ಉತ್ಪಾದಿಸುವ ಕೇಂದ್ರಗಳಿಗೆ (ಕೆಪಿಸಿ - 13, ಕೆಇಬಿ - 6, ಖಾಸಗಿ - 1) ಆಗ ಅವುಗಳ ಒಟ್ಟು ಸ್ಥಾಪಿತ ಸಾಮರ್ಥ್ಯ 3492.67 ಮೆಗಾವಾಟ್‌ಗಳು. ಇದರಿಂದ ವಾರ್ಷಿಕ ವಿದ್ಯುಚ್ಛಕ್ತಿ ಉತ್ಪಾದನೆಯು 16318 ದಶಲಕ್ಷ ಯೂನಿಟ್‌ಗಳಾಗಿರುತ್ತದೆ.

ಆ) 1993-94 13336 ಎಮ್.ಯು

1994-95 15548 ಎಮ್.ಯು.